# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

ಸಿ.ಸಿ. ನಂ.769/2015

ಸಿಡಬ್ಲ್ಯೂ-6 ಪಿಡಬ್ಲ್ಯೂ-1

| | |
|---|---|
| ಹೆಸರುಃ | ಬಾಬು |
| ತಂದೆಯ ಹೆಸರುಃ | ರಾಮಚಂದ್ರ |
| ವಯಸ್ಸುಃ | 45 ವರ್ಷ |
| ಉದ್ಯೋಗಃ | ವೆಲ್ಡಿಂಗ್ ಕೆಲಸ |
| ವಾಸ ಸ್ಥಳಃ | ಸೇಡಂ |

ದಿನಾಂಕ 26-05-2022

ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ಅಭೀಲಾಶ ಇವರು ರಸ್ತೆ ಅಪಘಾತದಲ್ಲಿ ತೀರಿಕೊಂಡಿರುತ್ತಾರೆ. ಅಪಘಾತವು ಜಿ.ಕೆ. ರಸ್ತೆಯ ನಮ್ಮ ಗ್ಯಾರೇಜಿನ ಮುಂದೆ ಆಗಿತ್ತು. ಅಪಘಾತವನ್ನು ನಾನು ಕಣ್ಣಾರೆ ಕಂಡಿರುತ್ತೇನೆ. ಈಗ 6 ವರ್ಷಗಳ ಹಿಂದೆ ಅಭೀಲಾಶ ಇವರು ಗಣಪತಿ ದೇವರನ್ನು ನೋಡಿ 09.00 ಗಂಟೆಗೆ ರಸ್ತೆಯ ಮೇಲೆ ಬರುತ್ತಿರುವಾಗ ಒಂದು ಮೋಟಾರ ಸೈಕಲ್ ವಿಸಿಎಫ್ ಪ್ಯಾಕ್ಟರಿ ಕಡೆಯಿಂದ ಜೋರಿನಿಂದ ಬರುತ್ತಿತ್ತು ಮತ್ತು ಅದು ಅಭೀಲಾಶ ಇವರಿಗೆ ಹಾಯಿಸಿ ಅಪಘಾತಪಡಿಸಿತ್ತು. ಆಗ ಅಭೀಲಾಶ ಇತನಿಗೆ ತಲೆಗೆ ಪೆಟ್ಟಾಗಿತ್ತು ಕಿವಿಯಿಂದ ರಕ್ತ ಬರುತ್ತಿತ್ತು. ಆಗ ನಾನು ಮತ್ತು ಇತರರು ಸೇಡಂ ಸರಕಾರಿ ಆಸ್ಪತ್ರೆಗೆ ಸೇರಿಕೆ ಮಾಡಿರುತ್ತೇವೆ. ಆಗ ವೈದ್ಯರು ಹೆಚ್ಚಿನ ಚಿಕಿತ್ಸೆಗೆ ಕಲಬುರಗಿಗೆ ತೆಗೆದುಕೊಂಡು ಹೋಗುತ್ತಿರುವಾಗ ಮಾರ್ಗ ಮಧ್ಯೆದಲ್ಲಿ ಅಭೀಲಾಶ ಮೃತಪಟ್ಟಿರುತ್ತಾನೆ. ಅಪಘಾತವು ಮೋಟಾರು ವಾಹನ ಚಾಲಕನ ತಪ್ಪಿನಿಂದ ಆಗಿರುತ್ತದೆ. ಬೈಕ ಸವಾರನನ್ನು ನೋಡಿದ್ದಲ್ಲಿ ಗುರುತಿಸುತ್ತೇನೆ. (ಆರೋಪಿ ಈ ದಿವಸ ಗೈರು ಹಾಜರಿದ್ದು ಆರೋಪಿಯ ಗುರುತುಪರಿಚಯದ ಕುರಿತು ಅವರ ಪರ ವಕೀಲರು ಆಕ್ಷೇಪಣೆ ಇರುವುದಿಲ್ಲ ಎಂದು ವಾದ ಮಂಡಿಸಿರುತ್ತಾರೆ.) ಘಟನೆಯ ಕುರಿತು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ. ಆ ದಿವಸ ಅಪಘಾತಪಡಿಸಿದ ಬೈಕನ್ನು ನೋಡಿದ್ದಲ್ಲಿ ಗುರುತಿಸಲು ಆಗುವುದಿಲ್ಲ.

**(ಈ ಹಂತದಲ್ಲಿ ಸ.ಸ.ಅ.ರವರು ವಿನಂತಿಯ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಲಾಯಿತು.)**

**ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ಅಪಘಾತ ದಿನಾಂಕ 20.09.2015 ರಂದು ಆಗಿರುತ್ತದೆ ಎಂದರೆ ಸರಿ. ಅಪಘಾತಪಡಿಸಿದ ಮೋಟಾರ ಸೈಕಲ ನಂ.KA-34-V4108 ಎಂದರೆ ಸರಿ. ಅಪಘಾತ ಆರೋಪಿ ಬೈಕನ್ನು ಅತೀ ಜೋರಿನಿಂದ ನಿಷ್ಕಾಳಜೀತನದಿಂದ ನಡೆದ್ದರಿಂದ ಆಗಿರುತ್ತದೆ ಎಂದರೆ ಸರಿ.

**ಪಾಟೀ ಸವಾಲುಃ ಶ್ರೀ ಎ. ಎಮ್. ಆರೋಪಿ ಪರ ವಕೀಲರಿಂದ**

ನನ್ನದು ಕಳೆದ 8-10 ವರ್ಷಗಳಿಂದ ವೆಲ್ಡಿಂಗ್ ಅಂಗಡಿ ಇರುತ್ತದೆ ಎಂದರೆ ಸರಿ. ನನ್ನ

ಅಂಗಡಿಯ ಹತ್ತಿರ ಒಂದು ದೊಡ್ಡ ಮಗ ಇರುತ್ತದೆ ಎಂದರೆ ಸರಿ. ನಾನು ಯಾವಾಗಲೂ ಗಾಡಿಗೆ ವೆಲ್ಡಿಂಗ್ ಕೆಲಸ ಮಾಡುತ್ತಿರುತ್ತೇನೆ ಎಂದರೆ ಸರಿ. ನನ್ನ ಅಂಗಡಿಯ ಅಕ್ಕ-ಪಕ್ಕದಲ್ಲಿ ಬೇರೆ ಬೇರೆ ಅಂಗಡಿಗಳು ಸಹ ಇರುತ್ತವೆ ಎಂದರೆ ಸರಿ. ರೋಡಿನ ಆಚೆಬದಿಯಲ್ಲಿ ವೈನ್ ಶಾಪ ಮತ್ತು ಬೇರೆ ಬೇರೆ ಅಂಗಡಿಗಳು ಇರುತ್ತವೆ ಎಂದರೆ ಸರಿ. ರಸ್ತೆ ಸಾಕಷ್ಟು ವಾಹನ ದಟ್ಟನೆಯಿಂದ ಕೂಡಿರುತ್ತದೆ ಎಂದರೆ ಸರಿ. ಗಣೇಶ ನಗರದಿಂದ ಮತ್ತು ಸಾಯಿಬಾಬಾ ಕಾಲೋನಿಯಿಂದ ಮತ್ತು ನನ್ನ ಅಂಗಡಿಯ ಬದಿಯಿಂದ ಸಾಕಷ್ಟು ವಾಹನಗಳು ಓಡಾಡುತ್ತವೆ ಎಂದರೆ ಸರಿ. ಅಪಘಾತ ಸ್ಥಳದಲ್ಲಿ ವಾಹನಗಳು ಸಾವಕಾಶವಾಗಿ ಬರುತ್ತವೆ ಎಂದರೆ ಸರಿಯಲ್ಲ. ಗುಲಬರ್ಗಾ ಕಡೆಗೆ ಸಾಗುವ ರಸ್ತೆಯಲ್ಲಿ ರೋಡ ಹಂಪ ಇರುತ್ತವೆ ಎಂದರೆ ಸರಿ. ಆದ್ದರಿಂದ ವಾಹನಗಳು ಸಾವಕಾಶವಾಗಿ ಬರುತ್ತವೆ ಎಂದರೆ ಸರಿ. ಊಡಗಿ ಕಡೆಯಿಂದ ಬರುವ ವಾಹನಗಳು ಸಹ ಸಾವಕಾಶವಾಗಿ ಬರುತ್ತವೆ ಎಂದರೆ ಸರಿ. ದ್ವಿಚಕ್ರ ವಾಹನ ಎಷ್ಟು ವೇಗ ಮತ್ತು ಹೇಗೆ ಬರುತ್ತಿತ್ತು ಎಂದು ನನಗೆ ಹೇಳಲು ಬರುವುದಿಲ್ಲ ಎಂದರೆ ನಾನು ನೋಡಿಲ್ಲ. ಸಾಕ್ಷಿ ವಾಹನ ಪ್ರತಿ ಗಂಟೆಗೆ 75 ಕಿ.ಮೀ. ವೇಗ ಇತ್ತು ಎಂದು ನುಡಿಯುತ್ತಾರೆ. ನಾನು ದ್ವಿಚಕ್ರ ವಾಹನದ ಸ್ಪಿಡೋಮಿಟರ್ ನೋಡಿಲ್ಲ ವಾಹನ ಯಾವ ಕಲರ್ ಹಾಗೂ ಅದರ ಪಾಸಿಂಗ್ ನಂಬರ ಯಾವುದು ಇತ್ತು ಎಂದು ನನಗೆ ಹೇಳಲು ಬರುವುದಿಲ್ಲ. ಪೊಲೀಸರು ನನಗೆ ವಾಹನದ ನಂಬರ ಬಗ್ಗೆ ಹೇಳಿಲ್ಲ ಮತ್ತು ಅದರ ಬಗ್ಗೆ ಹೇಳಿಕೆ ಪಡೆದುಕೊಂಡಿಲ್ಲ. ಅಪಘಾತ ಯಾವ ದಿನಾಂಕದಂದು ಆಗಿರುತ್ತದೆ ಎಂದು ಹೇಳಲು ಬರುವುದಿಲ್ಲ. ಪೊಲೀಸರು ನನ್ನ ಹೇಳಿಕೆಯನ್ನು ಯಾವ ದಿನಾಂಕ ಪಡೆದುಕೊಂಡಿರುತ್ತಾರೆ ಎಂದು ಹೇಳಲು ಬರುವುದಿಲ್ಲ.

ಆ ದಿವಸ ನಾನು ಕೆಲಸ ಮಾಡುತ್ತಿರುವಾಗ ಒಬ್ಬ ಹುಡುಗ ನನ್ನಲ್ಲಿಗೆ ಬಂದಿದ್ದ. ಆ ಹುಡುಗ ಅಪಘಾತವಾದಾಗ ಸ್ಥಳಕ್ಕೆ ಬಂದಿರಲಿಲ್ಲ. ಅಪಘಾತವಾದ ನಂತರ ಸ್ಥಳದಲ್ಲಿ ಮೃತ ಅಭೀಲಾಶ ಇತನ ತಮ್ಮ ಮತ್ತು ತಾಯಿ ಬಂದಿದ್ದರು. ದಿನಾಂಕ 20.09.2015 ರಂದು ನಾನು ವೆಲ್ಡಿಂಗ್ ಕೆಲಸ ಮಾಡುತ್ತಿರುವಾಗ ದ್ವಿಚಕ್ರ ವಾಹನ ಅತೀ ಜೋರಿನಿಂದ ಮತ್ತು ನಿಷ್ಕಾಳಜೀತನದಿಂದ ಬಂದು ಅಭೀಲಾಶ ಇತನಿಗೆ ಹಾಯಿಸಿ ಅಪಘಾತಪಡಿಸಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ನನಗೆ ದ್ವಿಚಕ್ರ ವಾಹನವನ್ನು ತೋರಿಸಿಲ್ಲ. ನಾನು ಪೊಲೀಸರ ಮುಂದೆ ಮೊಟಾರ ಸೈಕಲ ನಂ.KA34 V4108 ಇತ್ತು ಎಂದು ಹೇಳಿಕೆ ನೀಡಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮೃತ ಅಭೀಲಾಶ ಇತನ ಕುಟುಂಬಕ್ಕೆ ಪರಿಹಾರ ಹಣ ದೊರೆಯುವ ಉದ್ದೇಶದಿಂದ ಆರೋಪಿಯ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಘಟನೆಗೂ ಆರೋಪಿಗೂ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರ.ದ.ನ್ಯಾದಂ.ಸೇಡಂ.

*SYH